# ಸೂರ್ಯ ಪಶ್ಚಿಮದಲ್ಲಿ ಮೂಡುತ್ತಾನಾ?

ಕೆಲವೊಮ್ಮೆ ಶಾಲಾ ಶಿಕ್ಷಕರೇ ತಪ್ಪು ಬರೆಯುವುದು, ಹೇಳಿಕೊಡುವುದುಂಟು. ಮಕ್ಕಳು 'ಮಕ್ಕಿಕಾ ಮಕ್ಕಿ' ಕಾಪಿ ಮಾಡಿದಾಗ ತಪ್ಪು ಗೊತ್ತಾಗುವುದೇ ಇಲ್ಲ. ಮನೆಯಲ್ಲಿ ಹೆತ್ತವರು ಮಕ್ಕಳ ಪುಸ್ತಕ, ಬರವಣಿಗೆಗಳನ್ನು ನೋಡಿದಾಗ ತಪ್ಪುಗಳ ಅರಿವಾಗುವುದೂ ಇದೆ.

■ ಅಪರ್ಣ ಜಿ.



ಶಾಲಾ ದಿನಗಳ ಅವಿಸ್ಮರಣೀಯ ಘಟನೆಗಳ ನೆನಪು ಜೀವನದುದ್ದಕ್ಕೂ ಸವಿನೆನಪಾಗಿಯೇ ಉಳಿಯುತ್ತದೆ.

ನಾನು ಚಿಕ್ಕಂದಿನಲ್ಲಿ ಓದಿದ್ದು ಸರ್ಕಾರಿ ಶಾಲೆ. ಅಲ್ಲಿಯ ಶಿಕ್ಷಕರು ಮಾಡಿದ ಅವಾಂತರ ಒಂದೆರಡಲ್ಲ. ಅವರೆಲ್ಲರೂ ಸದ್ಗುಣಗಳ ಮಹಾಪೂರ. ಆದರೆ ಕೆಲವು ಶಿಕ್ಷಕರು ಪಾಠದ ವಿಷಯದಲ್ಲಿ ಅವರನ್ನು ಅವರೇ ಹಾಸ್ಯಕ್ಕೆ ಗುರಿ ಮಾಡಿಕೊಂಡಿದ್ದರು.

ಒಂದು ದಿನ ನನ್ನ ಕಾಪಿ ಪುಸ್ತಕದಲ್ಲಿ 'ಸೂರ್ಯನು ಪಶ್ಚಿಮದಲ್ಲಿ ಮೂಡುತ್ತಾನೆ' ಎಂದು ಬರೆದು ಕಳುಹಿಸಿದ್ದರು. ನಾನು ಅದನ್ನೇ ನೋಡಿ ಕೆಳಗೆ ಕಾಪಿ ಮಾಡುತ್ತಿದ್ದಾಗ ನನ್ನಪ್ಪ ನೋಡಿ ಬಿಟ್ಟರು. ಇದೇನಿದು ಮಕ್ಕಳಿಗೆ ತಪ್ಪು ವಿಷಯ ಹೇಳಿ ಕೊಡುತಿದ್ದಾರಲ್ಲ ಎಂದು ನನ್ನ ಕಾಪಿ ಪುಸ್ತಕ ತೆಗೆದುಕೊಂಡು ಬರೆಯುವುದು ಬೇಡ ಎಂದು ಬಿಟ್ಟರು. ನನಗೆ ಗಾಬರಿಯಾಯಿತು. ಆ ಮೇಷ್ಟ್ರ ಏಟಿನ ರುಚಿ ಬೇರೆ ಬಲು ಕಾರ! ಅಪ್ಪ ಹಾಗೂ ಸಮಾಧಾನ ಮಾಡಿ ಮಾರನೆ ದಿನ ಶಾಲೆಗೆ ಬರುವುದಾಗಿ ಹೇಳಿ ಸುಮ್ಮನಿರಿಸಿದರು.

ಮಾರನೆ ದಿನ ಅಪ್ಪ ಬಂದು ಕೇಳಿದಾಗ ಆ ಮೇಷ್ಟ್ರಿಗೆ ದಿಗಿಲಾಗಿರಬೇಕು. ಅಂತೂ ಇನ್ನು ಮುಂದೆ ಜಾಗರೂಕರಾಗಿ ಇರಿ ಎಂದು ಅವರಿಗೆ ಹೇಳಿ, ಕಾಪಿ ಪುಸ್ತಕ ಅಕ್ಷರ ಕಲಿಸಲೇ ಆದರೂ ಮಕ್ಕಳಿಗೆ ತಪ್ಪು ಮಾಹಿತಿ ನೀಡಬಾರದು ಎಂದು ಹೇಳಿ ಹೋದರು. ಆದರೂ ಅವಮಾನ ಮಾಡಿಸಿದನೆಂದು ಎಂದಿಗೂ ನನ್ನನ್ನು ವಿನಾ ಕಾರಣ ದಂಡಿಸಿ ದ್ವೇಷ ಸಾಧಿಸಲಿಲ್ಲ.

ಮತ್ತೊಂದು ದಿನ ಬೇರೊಂದು ಮೇಷ್ಟ್ರು 999ಕ್ಕೆ 111 ಕೂಡುವ ಲೆಕ್ಕ ಹೇಳಿ ಕೊಡುತ್ತಿದ್ದರು. ಪ್ರತಿ ಅಂಕಿಯನ್ನು ಕೂಡುವಾಗ ದಶಕ ಒಂದು ಎಂದು ಮೇಲೆ ಬರೆದು ಕೆಳಗೆ ಸೊನ್ನೆಯನ್ನಷ್ಟೇ ಬರೆಯುತ್ತಿದ್ದರು. ಆ ದಶಕಗಳನ್ನು ಮುಂದಿನ ಅಂಕಿಗೆ ಕೂಡಲೇ ಇಲ್ಲ. ಕೊನೆಗೆ ಉತ್ತರ 1000 ಬಂದಿತು. ಅಣ್ಣನ ಜೊತೆ ಆಗೀಗ ಅಂಗಡಿಯಲ್ಲಿರುತ್ತಿದ್ದ ನನಗೆ ಅಯ್ಯೋ 999 ರೂಪಾಯಿಗೆ 1 ರೂಪಾಯಿ ಸೇರಿಸಿದರೇನೆ 1000 ವಾಗುತ್ತಲ್ಲ ಎಂಬ ಗೊಂದಲ. ಕೇಳಲಿಲ್ಲ. ಮನೆಗೆ ಬಂದು ಅಪ್ಪನನ್ನು ಕೇಳಿದೆ ಇದು ಸರಿಯಾ ಎಂದು. ಅಪ್ಪನಿಗೆ ಬೇಸರವಾಗಿ ನಾಳೆಯಿಂದ ನಾನೇ ನಿನಗೆ ಪಾಠ ಹೇಳಿ ಕೊಡುತ್ತೇನೆ ಎಂದರು.

ಸರಿ ಮೊದಲಿಗೆ ಗಣಿತ ಪಾಠ ಶುರುವಾಯಿತು. ಅಪ್ಪನೇನೋ ಒಳ್ಳೆಯ ಜ್ಞಾನಿ ಎಂಬುದರಲ್ಲಿ ಸಂಶಯವೇ ಇಲ್ಲ. ಆದರೆ ಮಕ್ಕಳಿಗೆ ಪಾಠ ಮಾಡುವುದು ಸುಲಭವೇ? ಪ್ರಾಯೋಗಿಕವಾಗಿ 999 ಕ್ಕೆ 111 ಸೇರಿಸಿದರೆ 1110 ಎಂದು ಗೊತ್ತಿದ್ದರೂ ಪುಸ್ತಕದ ವಿವರಣೆ ಕೊಟ್ಟು ಹೇಳಿ ಕೊಡುವುದು ಕಷ್ಟ. ಮೊದಲಿಗೆ ಬಿಡಿ, ಹತ್ತು, ನೂರು, ಸಾವಿರ ಎಂದು ಸ್ಥಾನ ಬೆಲೆ ಹೇಳಿಕೊಟ್ಟರು. ಬಿಡಿಯನ್ನು ಬಿಡಿಯ ಕೆಳಗೂ, ಹತ್ತನ್ನು ಹತ್ತರ ಕೆಳಗೂ ಬರೆದುಕೊಳ್ಳಬೇಕು ಎಂದರು. ಈಗ 999 ಕ್ಕೆ 111 ಕೂಡು ಎಂದು ಅವರೇ ಬರೆದು ಕೊಟ್ಟರು. ನಾನು 110 ಎಂದು ಉತ್ತರ ಬರೆದೆ. ಏಕೆ ಹೀಗೆ ಬರೆದೆ ಎಂದು ಅಪ್ಪ ಗದರಿಸಿದರು. 'ನೀವು ಬಿಡಿ ಎಂದಿದ್ದನ್ನು ಬಿಟ್ಟೆ' ಎಂದುಬಿಟ್ಟೆ. ಬಿಡಿ ಎಂದರೆ ಅದರ ಸ್ಥಾನ ಬೆಲೆಯ ಹೆಸರಷ್ಟೇ ಎಂದು ಕಷ್ಟಪಟ್ಟು ಅರ್ಥ ಮಾಡಿಸಿದರು. ಮಕ್ಕಳಿಗೆ ಪಾಠ ಮಾಡುವ ಕಷ್ಟ ಆವತ್ತು ಅಪ್ಪನಿಗೆ ಅರಿವಾಗಿರಬೇಕು!

ಹಾಗೆಂದು ಆ ಶಾಲೆಯಲ್ಲಿ ಒಳ್ಳೆಯ ಮೇಷ್ಟ್ರೇ ಇರಲಿಲ್ಲವೆಂದಲ್ಲ. ಅಲ್ಲಿ ಓದಿದ ಎಷ್ಟೋ ಜನ ಈಗ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದ್ದರಲ್ಲಿ ಎರಡು ಮಾತಿಲ್ಲ. ಆದರೂ ಬಾಲ್ಯದ ಗೊಂದಲಗಳು ಸ್ಮರಣೀಯ. ಶಾಲಾ ನೆನಪು ಎಂದಿಗೂ ಅಜರಾಮರ.. ■